**ಕರ್ನಾಟಕ ಸರ್ಕಾರ**
**ಮಕ್ಕಳ ರಕ್ಷಣಾ ನಿರ್ದೇಶನಾಲಯ**
**ಮೂರನೇ ಮಹಡಿ,ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01**
**eMail:** icps.kar@gmail.com **ದೂರವಾಣಿ: 080-22867381**

ಸಂ: ಮರನಿ/ಆಡಳಿತ/ಬಯೋಮೆಟ್ರಿಕ್-247/2020-21 ದಿ:04-03-2021

**ಸುತ್ತೋಲೆ**

**ವಿಷಯ**:ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳು ಹಾಗೂ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ Biometric ಸಾಧನವನ್ನು ಅಳವಡಿಸಿ ದೈನಂದಿನ ಹಾಜರಾತಿ ನಿರ್ವಹಿಸುವ ಕುರಿತು.

*********

ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳು, ಮತ್ತು ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ/ಸಿಬ್ಬಂದಿಗಳ ಹಾಜರಾತಿಯನ್ನು Biometric ಮೂಲಕ ಹಾಜರಾತಿಯನ್ನು ಪಾಲಿಸಲು ಕಡ್ಡಾಯವಾಗಿ ಕ್ರಮ ಕೈಗೊಳ್ಳುವುದು.

ಮುಂದುವರೆದು ಎಲ್ಲಾ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳು ಹಾಗೂ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಹಾಜರಾತಿಯನ್ನು ಕಡ್ಡಾಯವಾಗಿ ಬೆಳಗಿನ ಉಪಹಾರ, ಮಧ್ಯಾಹ್ನ ಹಾಗೂ ರಾತ್ರಿ ಪಾಳಯದ ಊಟದ ಅವಧಿಯಲ್ಲಿ Biometric ನಲ್ಲಿ ಹಾಜರಾತಿಯನ್ನು ಪಡೆಯಲು ಕ್ರಮವಹಿಸಲು ಸೂಚಿಸಿದೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಕಛೇರಿಗಳಲ್ಲಿ ಈಗಾಗಲೇ Biometric ಸಾಧನವನ್ನು ಅಳವಡಿಸಲು ಕ್ರಮ ಕೈಗೊಳ್ಳುತ್ತಿದ್ದು Biometric ಸುಸ್ಥಿತಿಯಲ್ಲಿ ಇರುವಂತೆ ಕಾರ್ಯವಹಿಸುವುದು. Biometric ಸಾಧನ ಇಲ್ಲದ ಕಛೇರಿಗಳು/ಸಂಸ್ಥೆಗಳು ಕಡ್ಡಾಯವಾಗಿ 31-ಮಾರ್ಚ್-2021 ರ ಅಂತ್ಯದೊಳಗೆ ಸಾಧನಗಳನ್ನು ಅಳವಡಿಸಿ ಮುಂದಿನ ಆರ್ಥಿಕ ವರ್ಷದಿಂದ Biometric ನಲ್ಲಿ ಹಾಜರಾತಿಯನ್ನು ನಿರ್ವಹಿಸುವುದನ್ನು ಈ ಮೂಲಕ ಕಡ್ಡಾಯಗೊಳಿಸಲಾಗಿದೆ.

ಈ ಕುರಿತು ತಕ್ಷಣ ಕ್ರಮ ವಹಿಸಿ ಕೇಂದ್ರ ಕಛೇರಿಗೆ ಒಂದು ವಾರದೊಳಗೆ ಅನುಪಾಲನ ವರದಿಯನ್ನು ಸಲ್ಲಿಸಲು ಈ ಮೂಲಕ ಸೂಚಿಸಿದೆ.

04.03.2021

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕೆ:**

1. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು.
2. ಬಾಲ ನ್ಯಾಯ ಮಂಡಳಿ, ಎಲ್ಲಾ ಜಿಲ್ಲೆಗಳು.
3. ಮಕ್ಕಳ ಕಲ್ಯಾಣ ಸಮಿತಿ, ಎಲ್ಲಾ ಜಿಲ್ಲೆಗಳು.
4. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು.
5. ಎಲ್ಲಾ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳು, ಎಲ್ಲಾ ಜಿಲ್ಲೆಗಳು.
6. ಎಲ್ಲಾ ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳು, ಎಲ್ಲಾ ಜಿಲ್ಲೆಗಳು.